# <u>ಸಿ/ಸಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ಸಕಲೇಶಪುರ.</u>

ಉಪಸ್ಥಿತರುಃ

ಶ್ರೀ ಲಕ್ಷ್ಮೀ ನರಸಿಂಹ ಆರ್.ವಿ,

ಬಿ.ಎ.ಎಲ್., ಎಲ್.ಎಲ್.ಬಿ.,

ಸಿ/ಸಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ, ಸಕಲೇಶಪುರ.

**ಸಿ.ಸಿ. 02/2023**

ಪಿರ್ಯಾದುದಾರರು ಃ ಸಕಲೇಶಪುರ ಗ್ರಾಮಾಂತರ ಪೊಲೀಸ್ ಠಾಣೆ

ವಿರುದ್ಧ

ಆರೋಪಿತರು ಃ **1.** ಮಂಜುನಾಥ ಬಿನ್ ಲೇಟ್ ಪುಟ್ಟೇಗೌಡ,
**72** ವರ್ಷ,
2. ಪ್ರಥಮ್ ಬಿನ್ ರವಿಗೌಡ,
32 ವರ್ಷ,
ವಾಸ - ಅಚ್ಚನಹಳ್ಳಿ ಗ್ರಾಮ, ಹಾನುಬಾಳು ಹೋಬಳಿ,
ಸಕಲೇಶಪುರ ತಾಲ್ಲೂಕು, ಹಾಸನ ಜಿಲ್ಲೆ.

## <u>ದೋಷಾರೋಪಣೆ</u>

ನಾನು ಲಕ್ಷ್ಮೀ ನರಸಿಂಹ ಆರ್.ವಿ, ಬಿ.ಎ.ಎಲ್., ಎಲ್.ಎಲ್.ಬಿ., ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ., ಸಕಲೇಶಪುರ, ಈ ಮೂಲಕ ಆರೋಪಿತರಾದ ಇವರ ಮೇಲೆ ಮಾಡಿದ ದೋಷಾರೋಪಣೆ ಏನೆಂದರೆ.

ದಿನಾಂಕ ಃ **02.03.2022** ರಂದು ಬೆಳಿಗ್ಗೆ **10.00** ಗಂಟೆಯ ಸಮಯದಲ್ಲಿ ಸಕಲೇಶಪುರ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರಿದ ಅಚ್ಚನಹಳ್ಳಿ ಗ್ರಾಮದಲ್ಲಿ **1** ನೇ ಆರೋಪಿರವರು ಜಮೀನಿನ ಹತ್ತಿರ ಕಾಡಾನೆಗಳು ಬಂದಿವೆಯಂತೆ ಜಮೀನಿನ ಹತ್ತಿರ ಹೋಗಿ ನೋಡಿಕೊಂಡು ಬಾ ಎಂದು **2** ನೇ ಆರೋಪಿರವರಿಗೆ ತಿಳಿಸಿ ಹೋಗುವಾಗ ಹಾಗೆ ಹೋಗಬೇಡ ನನ್ನ ಬಂದೂಕನ್ನು ತೆಗೆದುಕೊಂಡು ಹೋಗು ಎಂದು **1** ನೇ ಆರೋಪಿರವರು ತನ್ನ ಮನೆಗೆ **2** ನೇ ಆರೋಪಿರವರನ್ನು ಕರೆದುಕೊಂಡು ಹೋಗಿ ತನ್ನ ಹೆಸರಿನಲ್ಲಿರುವ **23645** ನಂಬರಿನ

ಡಿ.ಬಿ.ಬಿ.ಎಲ್. ಬಂದದೂರಿಗೆ ತೋಟವನ್ನು ಲೋಡ್ ಮಾಡಿಕೊಟ್ಟು 1 ನೇ ಆರೋಪಿರವರು ಬಂದೂಕು ಪರವಾನಗಿಯಲ್ಲಿ ನೀಡಿರುವ ನಿರ್ಬಂಧನೆಗಳನ್ನು ಉಲ್ಲಂಘಿಸಿದ್ದ ಕಾರಣ, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 27, 30 ರಡಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಹಾಗೂ ಸದರಿ ಅಪರಾದವು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಬರುತ್ತದೆ.

ಮೇಲೆ ಹೇಳಿದ ಅದೇ ದಿನ, ಸ್ಥಳ ಮತ್ತು ಸಮಯದಲ್ಲಿ ಆರೋಪಿಯಾದ ನೀವುಗಳು 2 ನೇ ಆರೋಪಿರವರು 1 ನೆ ಆರೋಪಿರವರಿಗಿಂದ ಬಂದೂಕನ್ನು ಪಡೆದುಕೊಂಡು ಹೋಗಿ ಬೆಳಿಗ್ಗೆ 10.30 ಗಂಟೆಯಲ್ಲಿ ತನ್ನ ಗ್ರಾಮದ ಮಕ್ಕಿ ಮನೆ ಸರ್ವೆ ನಂ.117 ರ ತೋಟದ ಹತ್ತಿರ ಬಂದೂಕನ್ನು ನಿರ್ಲಕ್ಷತೆಯಿಂದ ತನ್ನ ಬಲ ಹೆಗಲ ಮೇಲಿಟ್ಟುಕೊಂಡು ನಡೆದುಕೊಂಡು ಹೋಗುತ್ತಿರುವಾಗ ತೋಟದ ಬದುವನ್ನು ದಾಟುವಾಗ ಆಕಸ್ಮಿಕವಾಗಿ ಎಡವಿ ಕಾಲು ಜಾರಿ ಬಂದೂಕು ಸಮೇತ ಕೆಳಗೆ ಜಾರಿ ಬಿದ್ದಾಗ ಬಂದೂಕು ಕಲ್ಲಿಗೆ ತಾಗಿ ಬಂದೂಕು ಫೈರ್ ಆಗಿ ಬಂದೂಕಿನಿಂದ ಸಿಡಿದ ಗುಂಡು 2 ನೇ ಆರೋಪಿರವರ ಬಲಭುಜಕ್ಕೆ ತಗುಲಿ ತೀವ್ರ ಸ್ವರೂಪದ ಗಾಯವನ್ನುಂಟು ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 338 ರಡಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಹಾಗೂ ಸದರಿ ಅಪರಾದವು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಬರುತ್ತದೆ.

[ಈ ದೋಷಾರೋಪಣೆಯನ್ನು ಈ ದಿನ ದಿನಾಂಕ 04.03.2025 ರಂದು ಆರೋಪಿತರಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಆತನ ಉತ್ತರವನ್ನು ಯಥಾವತ್ತಾಗಿ ದಾಖಲಿಸಿದೆ]

ಓ.ಹೇ.ಕೇ. ಸರಿ ಇದೆ.

ಸಿ/ಸಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಸಕಲೇಶಪುರ.

ಸಿ/ಸಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ,
ಸಕಲೇಶಪುರ

**ಸಿ.ಸಿ.ಸಂಖ್ಯೆ 02/2023**

ಪಿರ್ಯಾದುದಾರರು ಃ ಸಕಲೇಶಪುರ ಗ್ರಾಮಾಂತರ ಪೊಲೀಸ್ ಠಾಣೆ

ವಿರುದ್ಧ

ಆರೋಪಿ ಃ ಮಂಜುನಾಥ ಬಿನ್ ಲೇಟ್ ಪುಟ್ಟೇಗೌಡ,

1. ಪ್ರಶ್ನೆ ಃ ಈಗ ನಿಮಗೆ ಕನ್ನಡದಲ್ಲಿ ಓದಿ ಹೇಳಿದ ಆಪಾದನೆಯು ಅರ್ಥವಾಯಿತೇ?
ಉತ್ತರ ಃ

2. ಪ್ರಶ್ನೆ ಃ ನೀವು ಸದರಿ ಆಪಾದನೆಯನ್ನು ಒಪ್ಪಿಕೊಳ್ಳುವಿರೋ? ಅಥವಾ ವಿಚಾರಣೆಯಾಗಬೇಕೋ?
ಉತ್ತರ ಃ

ಮೇಲೆ ಹೇಳಿದ ಆಪಾದನೆಯನ್ನು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಸ್ವತಃ ನಾನೇ ಬರೆದುಕೊಂಡಿರುವುದು ನಿಜವಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಸಿ/ಸಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಸಕಲೇಶಪುರ.

ಸಿ/ಸಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ,
ಸಕಲೇಶಪುರ

**ಸಿ.ಸಿ.ಸಂಖ್ಯೆ 02/2023**

ಪಿರ್ಯಾದುದಾರರು ಃ ಸಕಲೇಶಪುರ ಗ್ರಾಮಾಂತರ ಪೊಲೀಸ್ ಠಾಣೆ

ವಿರುದ್ಧ

ಆರೋಪಿ ಃ ಪ್ರಥಮ್ ಬಿನ್ ರವಿಗೌಡ,

1. ಪ್ರಶ್ನೆ ಃ ಈಗ ನಿಮಗೆ ಕನ್ನಡದಲ್ಲಿ ಓದಿ ಹೇಳಿದ ಆಪಾದನೆಯು ಅರ್ಥವಾಯಿತೇ?
ಉತ್ತರ ಃ

2. ಪ್ರಶ್ನೆ ಃ ನೀವು ಸದರಿ ಆಪಾದನೆಯನ್ನು ಒಪ್ಪಿಕೊಳ್ಳುವಿರೋ? ಅಥವಾ ವಿಚಾರಣೆಯಾಗಬೇಕೋ?
ಉತ್ತರ ಃ

ಮೇಲೆ ಹೇಳಿದ ಆಪಾದನೆಯನ್ನು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಸ್ವತಃ ನಾನೇ ಬರೆದುಕೊಂಡಿರುವುದು ನಿಜವಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಸಿ/ಸಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಸಕಲೇಶಪುರ.